ಕುರಿತಾದ ಕನಿಕರ. ಅವಳ ನಿಖರವಾದ ವಯಸ್ಸು ಎಷ್ಟು ಎನ್ನುವುದು ಅವಳಿಗೆ ಗೊತ್ತಿಲ್ಲ. ನೋಡಿದವರಿಗೂ ಹೇಳುವುದಕ್ಕೆ ಸಾಧ್ಯವಿಲ್ಲ. ಒಣಕಲು ಕಟ್ಟಿಗೆಯ ಹಾಗೆ ಸಪೂರಕ್ಕೆ ಉದ್ದವಾಗಿದ್ದ ಅವಳು ಹೇಳಿಕೊಳ್ಳುವಷ್ಟು ಆರೋಗ್ಯಭಾಗ್ಯ ಹೊಂದಿದವಳಲ್ಲ. ತಲೆನೋವಿನ ಒಂದು ಕಂಪ್ಲೇಂಟ್ ಸದಾ ಎನ್ನುವಂತೆ ಇದ್ದೇ ಇರುತ್ತಿತ್ತು. ಹಣೆಗೆ ಬಿಗಿಯಾಗಿ ಬಟ್ಟೆ ಕಟ್ಟಿಕೊಂಡು ಬಂದ ಕಾಂತಿ, "ಅಕ್ಕಾ, ಒಂದು ಲೋಟ ಬಿಸಿ ಬಿಸಿ ಕಾಫಿ" ಅಂದರೆ ಗೊತ್ತಾಗಿಬಿಡುತ್ತಿತ್ತು ನನಗೆ.

"ಮತ್ತೆ ಶುರುವಾಯ್ತಾ ಪೀಡೆ?" ಎನ್ನುತ್ತಾ ಸ್ಟ್ರಾಂಗ್ ಕಾಫಿ ಮಾಡಿಕೊಟ್ಟು, ಅವಳು ಗೋಡೆಗೊರಗಿ ಕೂತು ನಿಧಾನಕ್ಕೆ ಕುಡಿದು, ಆಮೇಲೆ ಶುರುವಾಗುತ್ತಿತ್ತು ಅವಳ ದಿನಚರಿ. ಇದೊಂದೇ ಅಲ್ಲ, ಇನ್ನೂ ಯಾವುದೋ ದೈಹಿಕ ಸಮಸ್ಯೆ ಅವಳಿಗಿದೆ ಎಂದು ನನ್ನದೊಂದು ಅಂದಾಜು. ಅದಕ್ಕೆ ಸಕಾರಣ ಕೂಡಾ ಇದೆ. ಇಪ್ಪತ್ತರಿಂದ ಮೂವತ್ತರೊಳಗೆ ಎಷ್ಟೂ ಹೇಳಬಹುದಾದ ವಯಸ್ಸಿನ ಕಾಂತಿಗೆ ಇನ್ನೂ ಮದುವೆ ಆಗಿಲ್ಲ. ಆಗುವ ಲಕ್ಷಣವೂ ಕಾಣಿಸುತ್ತಿರಲಿಲ್ಲ. ಆದರೆ ಅವಳ ತಂಗಿಗೆ ಮದುವೆಯಾಗಿ ಆಗಲೇ ಎರಡು ಮಕ್ಕಳು ಕೂಡಾ ಹುಟ್ಟಿಯಾಗಿದೆ. ನಮ್ಮನೆಯ ಡೈನಿಂಗ್ ಟೇಬಲ್ಲಿನ ಮೇಲೆ ದೊಡ್ಡ ಸ್ಟೀಲ್ ಡಬ್ಬ ಇದೆ ಅಂದರೆ ಅದರೊಳಗೆ ಏನಾದರೂ ಕುರುಕಲು ಇರುತ್ತದೆ ಎಂದು ಅರ್ಥ ಮಾಡಿಕೊಂಡಿದ್ದಾಳೆ ಕಾಂತಿ. ಮನೆಗೆ ತಂಗಿಯ ಮಕ್ಕಳು ಬಂದಾಗ, ಟೇಬಲ್ಲಿನ ಮೇಲೆ ಸ್ಟೀಲ್ ಡಬ್ಬಿ ಕಂಡರೆ, "ಏನಾದ್ರೂ ತಿಂಡಿ ಇದೆಯಾ ಅಕ್ಕ? ಮನೇಗೆ ಮಕ್ಕಳು ಬಂದಿದಾವೆ..." ಎಂದು ಕೇಳುವುದು ಅವಳಿಗೆ ಅಭ್ಯಾಸವಾಗಿಬಿಟ್ಟಿತ್ತು. ಕೊಡುವುದು ನನಗೂ. ಎಲ್ಲಾ ಸುಸೂತ್ರವಾಗಿರುವ ಅಕ್ಕತಂಗಿಯರೂ ಕೂಡಾ ಒಬ್ಬರ ಮೇಲೊಬ್ಬರು ಒಳಗೊಳಗೇ ಪೈಪೋಟಿ ಮಾಡುವುದನ್ನು ಕಂಡಿರುವ ನನಗೆ ಕಾಂತಿಯ ಇಂತಾ ಚರ್ಯೆಗಳಿಂದ ವಿಪರೀತದ ಅಚ್ಚರಿ. ಅರಿಷಡ್ವರ್ಗಗಳಲ್ಲಿ ಮತ್ಸರವೇ ಪ್ರಧಾನ ಗುಣ ಎಂದು ಕಂಡುಕೊಂಡಿದ್ದವಳು ನಾನು. ಇವಳ್ಯಾರಪ್ಪಾ ಲೋಕಕ್ಕಿಲ್ಲದವಳು ಎಂದು ಅಚ್ಚರಿಯಾದರೆ ಆಶ್ಚರ್ಯವೇನು? ನಾನು ಉಟ್ಟುಟ್ಟು ಬೇಜಾರು ಬಂದ ಸೀರೆಗಳನ್ನು ಕೊಟ್ಟರೆ ಚೆನ್ನಾಗಿರುವುದನ್ನು ತಂಗಿಗೆ ಉದಾರವಾಗಿ ದಾನ ಮಾಡಿಬಿಡುತ್ತಾಳೆ ಕಾಂತಿ. ಹಾಗೆ ದಾನ ಮಾಡಿದ್ದನ್ನು ಸಗರ್ವದಿಂದ ಹೇಳಿಕೊಳ್ಳುತ್ತಾಳೆ ಕೂಡಾ.

"ನಿಂಗೇಂತ ಕೊಟ್ಟಿದ್ದು ಕಣೇ. ತಂಗಿಗೆ ಕೊಡ್ತೀಂತ ಗೊತ್ತಿದ್ರೆ ನಿಂಗೆ ಕೊಡ್ತಾನೇ ಇರ್ಲಿಲ್ಲ..." ಸುಳ್ಳೇ ಸಿಟ್ಟು ಮಾಡುತ್ತಿದ್ದೆ ನಾನು. ನಗುತ್ತಿದ್ದಳು ಕಾಂತಿ.

"ಪಾಪ, ಅವಳಗೆ ಆಸೆ ಜಾಸ್ತಿ ಕಣಕ್ಕಾ..." ಎನ್ನುತ್ತಾ ವೈಸಿಕೊಳ್ಳುತ್ತಿದ್ದಳು ತಂಗಿಯನ್ನು. ಈ ತಂಗಿ ಕೂಡಾ ಮದುವೆ ಮಾಡಿಕೊಂಡು ಸುಖ ಸುರಿದುಕೊಳ್ಳುತ್ತಿರುವವಳೇನಲ್ಲ. ಗಾರೆ ಕೆಲಸ ಮಾಡುತ್ತಿದ್ದ ಗಂಡನಿಗೆ ಕಮಾಯಿ ಕಮ್ಮಿಯೇನಿರಲಿಲ್ಲ. ಆದರೆ ಎಷ್ಟಿದ್ದರೂ ಅವನ ಕುಡಿತಕ್ಕೆ ಸಾಲುತ್ತಿರಲಿಲ್ಲ. ಅವನ ಹೊಡೆತ ಬಡಿತ ತಾಳದೆ ಅವಳು ತೌರಿಗೆ ಓಡಿ ಬರುವುದು, ಸಣ್ಣದೊಂದು ಪಂಚಾತಿಕೆ ನಡೆದು ಮತ್ತೆ ಗಂಡನ ಬೆನ್ನು ಹತ್ತಿ ಹೋಗುವುದು ಎಲ್ಲವೂ ತಿಳಿಯುತ್ತಿತ್ತು ಕಾಂತಿಯಿಂದ. ತಂಗಿಯ ಈ ಸಂಸಾರಸುಖ ನೋಡಿ ಕಾಂತಿ ಮದುವೆಯ ಬಗ್ಗೆ ಜಿಗುಪ್ಸೆ ತಾಳಿರಬಹುದೇ ಅಂದುಕೊಂಡರೆ ಹಾಗೇನೂ ಆಗಿಲ್ಲ. "ಅದ್ಯಾವ ಗಂಡಸ್ರು ಕುಡಿಯಲ್ಲ ಹೇಳಿ ಅಕ್ಕಾ..." ಎಂದು ಸಾರಾಸಗಟಾಗಿ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗಿಬಿಡುತ್ತಿದ್ದಳು ಕಾಂತಿ.

"ನಿಂಗಿಂತಾ ಮುಂಚೆ ತಂಗಿಗೆ ಯಾಕೆ ಮದುವೆ ಮಾಡಿದ್ರು?" ಒಮ್ಮೆ ಕೇಳಿದ್ದೆ ಕುತೂಹಲದಿಂದ.

"ಯಾವಾಗ ನೋಡಿದ್ರೂ ನಂಗೆ ಹುಷಾರಿರಲ್ಲಲ್ಲ ಅಕ್ಕಾ, ನನ್ನ ಯಾರು ಮದುವೆ ಮಾಡ್ಕಂತಾರೆ?" ಸಲೀಸಾಗಿ ಪ್ರತ್ಯುತ್ತರಿಸಿದ್ದಳು ಕಾಂತಿ. ತನಗಿರುವ ಯಾವುದೋ ದೈಹಿಕ ದೌರ್ಬಲ್ಯವನ್ನು, ನ್ಯೂನತೆಯನ್ನು ಸಹಜವಾಗಿ ಒಪ್ಪಿಕೊಂಡುಬಿಟ್ಟಿದ್ದಳಾ ಕಾಂತಿ? ಅವಳಿಗೆ ಮದುವೆ ಮಾಡುವ